ನಮ್ಮ ಉತ್ಸಾಹವನ್ನು ಇನ್ನಷ್ಟು ಗಟ್ಟಿಗೊಳಿಸಿತು.

ಒಮ್ಮೆ ತಮ್ಮ ಪತ್ರದ ಜೊತೆಗೆ ನಿರಂಜನರು ತಮ್ಮ ಕೃತಿಗಳ ಪಟ್ಟಿ ಕಳಿಸಿದ್ದರು (1973). ಪುಸ್ತಕ ಪ್ರೀತಿಯ ನಾನು ತಕ್ಷಣ ಅವರಿಗೆ ಎಲ್ಲ ಪುಸ್ತಕಗಳ ಒಂದೊಂದು ಪ್ರತಿ ಕಳಿಸಲು ಬರೆದೆ. ಉತ್ತರವಾಗಿ, ನಿರಂಜನರು, 'ಎಲ್ಲವೂ ಇಲ್ಲ, ಇದ್ದುವನ್ನು ಕಳಿಸುತ್ತೇನೆ' ಎಂದು 'ಚಿರಸ್ಮರಣೆ', 'ರಂಗಮ್ಮನ ವಠಾರ', 'ವಿಮೋಚನೆ', 'ಮೃತ್ಯುಂಜಯ' ಕೆಲವು ಕಥಾಸಂಗ್ರಹಗಳ ಪಾರ್ಸಲ್ ಕಳಿಸಿದ್ದರು. ಒಬ್ಬ ಲೇಖಕನಿಗೆ ತನ್ನ ಪುಸ್ತಕಗಳನ್ನು ಮತ್ತೊಬ್ಬ ಲೇಖಕ ಕೊಂಡಾಗ, ಆತ್ಮೀಯತೆ ತೋರಿದಾಗ ಆಗುವ ಆನಂದದ ಕಲ್ಪನೆ ನನಗಿದೆ.

ಬೆಂಗಳೂರಿನಲ್ಲಿ ಪಿಯುಸಿ ಪರೀಕ್ಷೆಯ ಮೌಲ್ಯಮಾಪನಕ್ಕೆ ಹೋಗಿದ್ದ ಸಂದರ್ಭದಲ್ಲಿ, ಒಂದು ಸಂಜೆ, ನಿರಂಜನರನ್ನು ಅವರ ಜಯನಗರದ ಮನೆಯಲ್ಲಿ ಕಂಡೆ (1983 ಮೇ 12). ಅವರಿಗೆ ಮೊದಲೇ ಪತ್ರ ಬರೆದಿದ್ದೆ. ಹೇಮಾ ಮತ್ತು ನನ್ನ ಪುಟ್ಟ ಮಗಳು ಹೂ ಜೊತೆಗಿದ್ದರು. ಮನೆಯಲ್ಲಿ ಅನುಪಮಾ ಮತ್ತು ಮಗಳು ತೇಜಸ್ವಿನಿ ಇದ್ದರು. ನನ್ನ ಕವನ ಸಂಕಲನಗಳನ್ನು ಕಳಿಸುವ ಜೊತೆಗೆ ಅವರ ಜೊತೆ ಪತ್ರವ್ಯವಹಾರವನ್ನು ಇಟ್ಟುಕೊಂಡಿದ್ದೆ. ಅವರು ಉತ್ತರ ರೂಪವಾಗಿ ಸಂಕ್ಷಿಪ್ತವಾಗಿ, ತಕ್ಷಣ ಕಾರ್ಡ್ ಬರೆಯುತ್ತಿದ್ದರು. ಈಗ ನಮ್ಮನ್ನು ಕಂಡು ಅವರಿಗೆ ಆನಂದವಾಯಿತು. ನನ್ನನ್ನು ಕಂಡೊಡನೆ, ''ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ನಿಮ್ಮ 'ಮತ್ತೆ ಬಂದಿದ್ದಾಳೆ' ಸಂಕಲನದ ರಿವ್ಯೂ (1983 ಮೇ 1) ಬಂದಿದೆ, ಲಕ್ಷ್ಮೀನಾರಾಯಣ ಭಟ್ಟರ ವಿಮರ್ಶೆ ಚೆನ್ನಾಗಿದೆ'' ಎನ್ನುತ್ತ ಅದರ ಪ್ರತಿಯನ್ನು ನನ್ನ ಕೈಗಿತ್ತರು. ಡಾ. ಅನುಪಮಾ ಅವರು ನಮ್ಮ ಮಗಳಿಗೆ ಬೆಳ್ಳಿ ಆಟಿಕೆ ಗಿಲಗಂಚಿ ಮತ್ತು ಹೊಸ ಅಂಗಿ ಕೊಟ್ಟು ಹರಸಿದರು.

ಧಾರವಾಡದ 'ಕವಿವ ಸಂಘ'ದಲ್ಲಿ ಒಂದು ಅಪರೂಪದ ಕಾರ್ಯಕ್ರಮ ನಡೆಯಿತು. 60 ವರ್ಷ ತುಂಬಿದ ನಿರಂಜನರ ಸಾಹಿತ್ಯ ಕುರಿತ ಆ ವಿಚಾರಸಂಕಿರಣಕ್ಕೆ ಸಮಾರೋಪದ ಮುಖ್ಯ ಅತಿಥಿಯಾಗಿ ಎಂ.ಪಿ. ಪ್ರಕಾಶ್ ಬಂದಿದ್ದರು (1987 ಮೇ 17). ರಾಜಕಾರಣದಲ್ಲಿದ್ದರೂ ಸಾಹಿತ್ಯಿಕ ಒಲವು, ಓದು, ಪ್ರಗತಿಶೀಲ ಚಿಂತನೆ ಇಟ್ಟುಕೊಂಡಿದ್ದ ಪ್ರಕಾಶರ ಮಾತು ಕೇಳಿ, ನಿರಂಜನರ ಕೃತಿಗಳನ್ನು, ಅವರ ಚಿಂತನೆಯ ಹಿನ್ನೆಲೆಯಲ್ಲಿ ಮತ್ತೊಮ್ಮೆ ಓದಬೇಕೆಂಬ ಆಸೆ ಮೊಳೆತಿತು.

ಎರಡು ವರ್ಷಗಳ ಮಟ್ಟಿಗೆ 'ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಇಲಾಖೆ'ಗೆ ನನ್ನನ್ನು ಸದಸ್ಯನನ್ನಾಗಿ ನೇಮಿಸಲಾಗಿತ್ತು. ಆ ಸಮಿತಿಯ ಮೊದಲ ಸಭೆ 1988 ಜನವರಿ 20ರಂದು ನಡೆಯಿತು. ಜೀಶಂಪ, ಇದಿನಬ್ಬ ಮುಂತಾದ ಸದಸ್ಯರ ಜೊತೆಗೆ ಅನುಪಮಾ ನಿರಂಜನ ಅವರೂ ಸದಸ್ಯರಾಗಿದ್ದು ಹರ್ಷ ನೀಡಿತ್ತು. ಟಿ.ವಿ. ಗೋಪುರದ ಕಚೇರಿಯಲ್ಲಿ ನಡೆದ ಮೊದಲ ಸಭೆಯಲ್ಲಿ ಭೆಟ್ಟಿಯಾದೊಡನೆ ಅನುಪಮಾ ಅವರು, 'ಸಂಜೆ ಮನೆಗೆ ಬನ್ನಿ' ಎಂದರು. ಕಳೆದ ಏಳೆಂಟು ವರ್ಷಗಳಿಂದ ಇಲಾಖೆ ಪುಸ್ತಕಗಳನ್ನು ಖರೀದಿಸಿರಲಿಲ್ಲ. ನಾವೆಲ್ಲ ಔಪಚಾರಿಕ ಮಾತು ಮುಗಿಸಿದೆವು. ಸದ್ಯ ಮೊದಲ 5 ವರ್ಷದ ಪುಸ್ತಕ ಆಯ್ದುಕೊಳ್ಳೋಣ ಎಂದುಕೊಂಡೆವು. ಅಷ್ಟರಲ್ಲಿ ಗಡಿನಾಡಗಾಂಧಿ ಖಾನ್ ಅಬ್ದುಲ್ ಗಫಾರ್‌ಖಾನ್ ಅವರ ಸಾವಿನ ಸುದ್ದಿ ಬಂದಿತು. ಸಂತಾಪ ಸೂಚಿಸುವ ಗೊತ್ತುವಳಿಯೊಂದಿಗೆ ಸಭೆಯನ್ನು ಮುಂದೂಡಲಾಯಿತು. ಎಲ್ಲರೂ ಒಬ್ಬೊಬ್ಬರಾಗಿ ಹೊರಟರು. ಅನುಪಮಾ ಅವರು 'ನೀವು ನನ್ನ ಜೊತೆ ಬನ್ನಿ' ಎಂದರು. ಆಟೋದಲ್ಲಿ ಜಯನಗರದ ಅವರ ಮನೆಗೆ ಬಂದೆವು. ಗಾಲಿ ಕುರ್ಚಿಯಲ್ಲಿ ನಿರಂಜನರನ್ನು ನೋಡಿ ಆಘಾತವಾಯಿತು. ಅವರ ದೇಹ ಬಹಳಷ್ಟು ಕೃಶವಾಗಿತ್ತು. 1971ರಿಂದಲೇ ಪಾರ್ಶ್ವವಾಯುವಿಗೆ ಈಡಾಗಿದ್ದರು. ಆದರೆ ಮುಖದ ಮೇಲಿನ ಕಳೆ, ಮಾತಿನ ಉತ್ಸಾಹ ಮಾತ್ರ ಎಂದಿನಂತೆಯೇ ಇತ್ತು. ಮೊದಲಿನ ಗೆಲುವಿನಿಂದಲೇ ಮಾತಾಡಿದರು. 'ಇಂದು ಲೈಬ್ರರಿ ಸಭೆಗೆ ನೀವು ಬರುತ್ತೀರೆಂದು ಅನುಪಮಾ ಹೇಳಿದರು. ನಿಮ್ಮನ್ನು ಮನೆಗೆ ಕರೆತರಲು ಹೇಳಿದ್ದೆ. ನಿಮ್ಮನ್ನು ನೋಡಿ ಸಂತೋಷವಾಯಿತು' ಅಂದರು. ಈಗ ತೇಜಸ್ವಿನಿ ಮತ್ತು ಸೀಮಂತಿನಿ ಇಬ್ಬರೂ ಮನೆಯಲ್ಲಿದ್ದರು. ನನಗೆ ಏನು ಮಾತಾಡಬೇಕು, ನಿರಂಜನರ ಆರೋಗ್ಯದ ಬಗ್ಗೆ ಏನು ಹೇಳಬೇಕು ತಿಳಿಯದೇ ಗಲಿಬಿಲಿಗೊಂಡೆ. ಕಣ್ಣು ತುಂಬಿ ಬಂದುವು. ನನ್ನ ಕಡೆ ನೋಡುತ್ತ ನಿರಂಜನರು 'ಅನುಪಮಾ ಅಮ್ಮ' ಎಂದರು. ನಿರಂಜನರ ಬಾಲ್ಯಸಮೇತ ಸಮಗ್ರ ಬದುಕು ಕಣ್ಣೆದುರು ದೃಶ್ಯವತ್ತಾಯಿತು.

ಗ್ರಂಥಾಲಯದ ಮುಂದುವರಿದ ಸಭೆಗೆ ಹೋದಾಗ ಹೇಮಾನೂ ಬೆಂಗಳೂರಿಗೆ ಬಂದಿದ್ದಳು. 3 ಗಂಟೆಗೆ